ಇ) ಮೇಲಿನ 10 ಯೋಜನೆಗಳ ಪೈಕಿ ನದಿಗಳಲ್ಲಿ ಸಾಕಷ್ಟು ನೀರು ಲಭ್ಯವಿರದ ಕಾರಣ 4 ಏತ ನೀರಾವರಿ ಯೋಜನೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಈ) ಈ ಯೋಜನೆಗಳಿಗೆ ಈವರಗೆ 114.599 ಲಕ್ಷರೂ.ಗಳು ಖರ್ಚಾಗಿದೆ. 95-96ನೇ ಸಾಲಿನಲ್ಲಿ ಇಲ್ಲಿಯವರೆಗೆ ವಾರ್ಷಿಕ ನಿರ್ವಹಣೆಗಾಗಿ 1.60 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

ವಿಷಯ :- ಭೀಮ ಏತ ನೀರಾವರಿ ಯೋಜನೆಯ ಪ್ರಗತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1598 (1524)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ (ಅಫಜಲ್‌ಪುರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭೀಮಾ ಏತ ನೀರಾವರಿ ಯೋಜನೆಗೆ ಮಂಜೂರಾತಿ ದೊರಕಿದ್ದು ಯಾವಾಗ ?

ಆ) ಈ ಏತ ನೀರಾವರಿ ಯೋಜನೆಯಡಿಯಲ್ಲಿ ಎಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಹೊಂದುತ್ತದೆ?

ಇ)ಈ ಏತ ನೀರಾವರಿ ಯೋಜನೆಗೆ ಇದುವರೆಗೆ ಮಂಜೂರಾದ ಹಣವೆಷ್ಟು?

ಈ)ಕಾಮಗಾರಿಯು ಯಾವ ಹಂತದಲ್ಲಿದೆ?

ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಏಪ್ರಿಲ್ 92ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) 24282 ಹೆಕ್ಟೇರ್

ಇ) ಈ ಯೋಜನೆಗೆ ಇದುವರೆಗೆ ಮಂಜೂರಾದ ಹಣ ರೂ .630.00 ಲಕ್ಷಗಳು.

ಈ) ಯೋಜನೆಯ ಕೆಲಸವು ಪ್ರಾರಂಭಿಕ ಹಂತದಲ್ಲಿದೆ.

ವಿಷಯ :- ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1600 (1052)

ಡಾ॥ ಎ.ಬಿ..ಮಲಕರೆಡ್ಡಿ (ಯಾದಗಿರಿ):- ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ರಾಜ್ಯ ಸರ್ಕಾರವು ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸುವ ನಿರ್ಧಾರವನ್ನು ತೆಗೆದುಕೊಂಡಿದೆಯೇ

ಆ)ಹಾಗಿದ್ದಲ್ಲಿ ನಿರ್ಧಾರ ತೆಗೆದುಕೊಂಡ ದಿನಾಂಕ ಮತ್ತು ಸರ್ಕಾರಿ ಆದೇಶವನ್ನು ತಿಳಿಸುವುದು.

ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಹೌದು

ಆ) ಸರ್ಕಾರ ಆದೇಶ ಸಂಖ್ಯೆ; ಡಬ್ಲ್ಯೂ ಪಿ 18 ಪಿಸಿಒ 86 ದಿನಾಂಕ 20- 10- 1986

Sub:-B.D.A Houses in Domlur IInd stage Bangalore.

1)Unstarred L.A. question No. 1603 (1327)